## IUI ಚಿಕಿತ್ಸೆ ಬಹಳಷ್ಟುಬಾರಿ fail ಆಗಿದ್ದರೆ ಗರ್ಭನಾಳ, DFI ಹಾಗೂ TB endometrium ಪರೀಕ್ಷೆ ಮಾಡಿಸಿ ಕೊಂಡು ಚಿಕಿತ್ಸೆ ಪಡೆಯುವುದರಿಂದ, ಮಕ್ಕಳನ್ನು ಖಂಡಿತಾ ಪಡೆಯ ಬಹುದು.

ಸುಮಾರು 34 ವರ್ಷ ವಯಸ್ಸಿನ ಶ್ರೀಮತಿ ಸುನೀತಾ ಗರ್ಭಗುಡಿ ಐವಿಎಫ್ ಸೆಂಟರ್ ನ ಮೆಟ್ಟಿಲು ಹತ್ತಿದ್ದರು. ಸುಮಾರು 8 ವರ್ಷಗಳಿಂದ ಚಿಕಿತ್ಸೆಗಳನ್ನು ಪಡೆದರು ಮಕ್ಕಳಾಗದಿದ್ದ ಕಾರಣ ನಮ್ಮಲ್ಲಿಗೆ ಬಂದರು. ಸುಮಾರು ಎಂಟು ವರ್ಷಗಳಲ್ಲಿ ಆರು ಬಾರಿ IUI ಚಿಕಿತ್ಸೆ ಇವರಿಗೆ ವಿಫಲವಾಗಿತ್ತು. ಸದೃಢರಾಗಿದ್ದ ಇವರ ಪತಿಯ ವೀರ್ಯಾಣು ಪರೀಕ್ಷೆ ಮಾಡಲಾಗಿ ಅದು ನಾರ್ಮಲ್ ಆಗಿದೆ ಎಂದು ತಿಳಿದುಬಂದಿದೆ. ಇವರು ಬಹಳಷ್ಟು ನೊಂದು-ಬೆಂದು ಕೊನೆಯ ಪ್ರಯತ್ನವಾಗಿ ನಮ್ಮ ತಜ್ಞರನ್ನು ಭೇಟಿಯಾಗಿ ಆನಂತರ ಫಲಕಾರಿಯಾಗದೆ ಇದ್ದರೆ ಒಂದು ಮಗುವನ್ನು ದತ್ತು ಪಡೆದು ಬಿಡೋಣ ಎಂದು ಯೋಚಿಸಿ ಆಗಿತ್ತು.

ನಮ್ಮ ತಜ್ಞರು ಈಕೆಯನ್ನು ಪರೀಕ್ಷಿಸಿ HSG ಮಾಡಲಾಗಿ ಇವರ ಗರ್ಭನಾಳ ಸರಿ ಇದೆ ಎಂದು ತಿಳಿಯಲ್ಪಟ್ಟಿದೆ. ಆದರೂ ಆರು ಬಾರಿ IUI ಚಿಕಿತ್ಸೆ ವಿಫಲವಾಗಿದ್ದು ಏಕೆ? ಈ ಪ್ರಶ್ನೆ ನಮ್ಮ ತಜ್ಞರನ್ನು ಕಾಡಲಾರಂಭಿಸಿತು.

ಶ್ರೀಮತಿ ಸುನೀತಾ ರವರಿಗೆ ಲ್ಯಾಪ್ರೋಸ್ಕೋಪಿ ಚಿಕಿತ್ಸೆಯನ್ನು ನೀಡಲಾಯಿತು ಆಗ ಕಂಡುಬಂದ ವಿಷಯವೇನೆಂದರೆ ಅವರ ಗರ್ಭನಾಳಗಳು Ovaries ಮತ್ತು intestine ಗೆ ಅಂಟಿಕೊಂಡು ಬಿಟ್ಟಿದ್ದವು. ಹೀಗಾಗಿ ಗರ್ಭನಾಳವು ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ. ಈಕೆಯ ಪತಿಯ ವಯಸ್ಸು ನಲವತ್ತು ವರ್ಷಗಳು ದಾಟಿದ್ದವು. ಈಕೆಯ ಪತಿರಾಯ ಒಬ್ಬ chain smoker ಕೂಡ. ಇವರ DFI(DNA ಫ್ರಾಗ್ಮೆಂಟೇಶನ್ index) ಬಹಳಷ್ಟು ಜಾಸ್ತಿ ಕಂಡುಬಂದಿತ್ತು. 15ರಿಂದ 30ರವರೆಗೆ ಇರಬೇಕಾಗಿದ್ದ index ಇವರಿಗೆ 56 ದಾಟಿತ್ತು. ಸಾಮಾನ್ಯವಾಗಿ ವೆರಿಕೋಸಿಲ್ ಇದ್ದವರಿಗೆ, ಕುಡಿಯುವ ಅಭ್ಯಾಸ ಇದ್ದವರಿಗೆ ಹಾಗೂ ಸಿಗರೇಟ್ ಸೇವನೆ ಅತಿಯಾಗಿ ಮಾಡುವವರಿಗೆ, ಪ್ಲಾಸ್ಟಿಕ್ ಮತ್ತು ಪೇಯಿಂಟ್ ಇಂಡಸ್ಟ್ರಿಯಲ್ಲಿ ಕೆಲಸ ಮಾಡುವವರಿಗೆ ಇದು ಒಂದು ಸಮಸ್ಯೆಯಾಗಿರುತ್ತದೆ.




ನಮ್ಮ ತಜ್ಞವೈದ್ಯರು ತಡಮಾಡದೆ ಇವರಿಗೆ IVF ಚಿಕಿತ್ಸೆಯನ್ನು ಸೂಚಿಸಿದರು. ಇದರ ಜೊತೆಗೆ TESA(TESTICULAR ASPIRATION OF SPERM) ಹಾಗೂ ICSI ಸೂಚಿಸಲಾಯಿತು. ನಮ್ಮ ಅತ್ಯಾಧುನಿಕ ಲ್ಯಾಬ್ ನಲ್ಲಿ ಭ್ರೂಣವನ್ನು ತಯಾರಿಸಿ ಇದನ್ನು ಅವರ ಗರ್ಭದಲ್ಲಿ ಇರಿಸಲಾಯಿತು. 2ನೆ ಪ್ರಯತ್ನದಲ್ಲಿ ಗರ್ಭದರಿಸಿ ಈಗ ಮುದ್ದಾದ ಒಂದು ಹೆಣ್ಣು ಹಾಗೂ ಒಂದು ಗಂಡು ಮಗುವಿಗೆ ಜನ್ಮ ನೀಡಿದ್ದಾರೆ.

IUI ಚಿಕಿತ್ಸೆ ಬಹಳಷ್ಟುಬಾರಿ fail ಆಗಿದ್ದರೆ ಗರ್ಭನಾಳ, DFI ಹಾಗೂ TB endometrium ಪರೀಕ್ಷೆ ಮಾಡಿಸಿ ಕೊಂಡು ಚಿಕಿತ್ಸೆ ಪಡೆಯುವುದರಿಂದ, ಮಕ್ಕಳನ್ನು ಖಂಡಿತಾ ಪಡೆಯ ಬಹುದು.

Fertility ತಜ್ಞರ ಭೇಟಿ ಸೂಕ್ತ ಸಮಯದಲ್ಲಿ ಸಮಯವನ್ನು ವ್ಯರ್ಥ ಮಾಡದೇ ಮಾಡಬೇಕು.

